**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಆಯವ್ಯಯ/ಸುತ್ತೋಲೆ/ಸ.ಪ್ರ.ದ.ಕಾ/06/2021-22 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು ದಿನಾಂಕ 15.03.2022.

**::: ಸುತ್ತೋಲೆ :::**

ವಿಷಯ : ಹಿಂದಿನ ಆರ್ಥಿಕ ವರ್ಷದ/ ವರ್ಷಗಳ ವೇತನ ಬಾಕಿ ಮತ್ತು ಇತರೆ ಬಾಕಿಗಳನ್ನು ಸೆಳೆಯಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಪತ್ರ ಸಂಖ್ಯೆ: ಇಡಿ 46 ಹೆಚ್ ಪಿ ಸಿ 2022 ದಿ: 14.03.2022

2) ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 149 ವೆಚ್ಚ -8/2022 ದಿ: 10/03/2022

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಪತ್ರ / ಆದೇಶಗಳನ್ವಯ 2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2202-03-103-2-01 ರಡಿಯಲ್ಲಿ ಬಿಡುಗಡೆ ಆಗಿರುವ ಅನುದಾನದಲ್ಲಿ ಫೆಬ್ರುವರಿ 2022ರ ವರೆಗೆ ವೇತನ ಪಾವತಿಸಿದ ನಂತರ ಉಳಿತಾಯ ಕಂಡುಬಂದಿರುತ್ತದೆ. ಹಾಗೂ ಸರ್ಕಾರಿ ಆದೇಶ ಸಂಖ್ಯೆ ಇಡಿ 31 ಹೆಚ್ ಪಿ ಸಿ 2022 ಬೆಂಗಳೂರು ದಿನಾಂಕ 14.03.2022ರ ಆದೇಶದಲ್ಲಿ ಪುನರ್ ವಿನಿಯೋಗದ ಮೂಲಕ ಅನುದಾನ ಒದಗಿಸಲಾಗಿದೆ.

ಪ್ರಯುಕ್ತ ಕಾಲೇಜು ಶಿಕ್ಷಣ ಇಲಾಖೆಯ ಆಯವ್ಯಯ ಲೆಕ್ಕ ಶೀರ್ಷಿಕೆ 2202-03-103-2-01 ರಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಹಿಂದಿನ ಆರ್ಥಿಕ ವರ್ಷದ/ ವರ್ಷಗಳ ವೇತನ ಬಾಕಿ ಮತ್ತು ಇತರೆ ಬಾಕಿಗಳನ್ನು ಸೆಳೆಯಲು ಈ ಕೆಳಕಂಡ ಷರತ್ತುಗಳನ್ವಯ ಅನುಮತಿ ನೀಡಲಾಗಿದೆ.

**ಷರತ್ತುಗಳು:**

1. ಎಲ್ಲಾ ಹಿಂಬಾಕಿ ಬಿಲ್ಲುಗಳನ್ನು ಕಡ್ಡಾಯವಾಗಿ **HRMS & K2** ಮೂಲಕವೇ ಸೆಳೆಯತಕ್ಕದ್ದು.
2. HRMS ನಲ್ಲಿ ಸಿದ್ದಪಡಿಸಿದ DRAFT ಬಿಲ್ ಅನ್ನು ಮತ್ತೊಮ್ಮೆ ಪರಿಶೀಲಿಸಿ ಹಿಂಬಾಕಿ ಮೊತ್ತವು ಸರಿಯಾಗಿರುವ ಬಗ್ಗೆ ಖಾತರಿ ಪಡಿಸಿಕೊಂಡ ನಂತರವಷ್ಟೇ ಖಜಾನೆ -2 ತಂತ್ರಾಂಶಕ್ಕೆ ರವಾನಿಸುವುದು.
3. **ದಿನಾಂಕ 01.01.2016 ರಿಂದ 31.03.2019 ರ ಅವಧಿಗೆ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಬೋಧಕರು ತತ್ಸಮಾನ ವೃಂದದವರಿಗೆ 7ನೇ ಯುಜಿಸಿ ಪರಿಷ್ಕೃತ ವೇತನದಂತೆ ಹಿಂಬಾಕಿಯನ್ನು MANUAL ಆಗಿ ಪಾವತಿಸಲಾಗಿದೆ. ಹಿಂಬಾಕಿ ವಿವರಗಳು HRMS ನಲ್ಲಿ UP DATE ಆಗುವವರೆಗೆ ಸದರಿ ಅವಧಿಗೆ ಯಾವುದೇ ಬಾಕಿಯನ್ನು ಕ್ಲೇಂ ಮಾಡುವಂತಿಲ್ಲ.**
4. **ಸರ್ಕಾರದ ಪತ್ರ ಸಂಖ್ಯೆ ಇಡಿ 306 ಯು ಎನ್ ಇ 2021 ದಿನಾಂಕ 09.03.2022ರ ಪತ್ರದಲ್ಲಿ ತಿಳಿಸಿರುವಂತೆ ಕ್ರಮವಹಿಸಬೇಕಿರುವುದರಿಂದ ದಿನಾಂಕ 01.01.2006 ರಿಂದ 23.12.2009 ರ ಅವಧಿಯ, ದಿನಾಂಕ 01.01.2016 ರಿಂದ 31.03.2019ರ ಅವಧಿಯ ಮತ್ತು ದಿನಾಂಕ 01.04.2019 ರಿಂದ 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಂತೆ ವೇತನ ನಿಗದಿ ಆಗುವವರೆಗಿನ ವೇತನ ವ್ಯತ್ಯಾಸದ ಬಾಕಿ ಮೊತ್ತವನ್ನು ಇಲಾಖೆಯ ಮುಂದಿನ ಆದೇಶದವರೆಗೆ ಸೆಳೆಯದಂತೆ ಸೂಚಿಸಿದೆ.**
5. ನಿವೃತ್ತಿ/ ಮರಣ ಹೊಂದಿರುವ ನೌಕರರ ಮತ್ತು ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಆರ್ಥಿಕ ಸೌಲಭ್ಯಗಳನ್ನು ಆದ್ಯತೆಯ ಮೇಲೆ ಪರಿಗಣಿಸಿ ಪಾವತಿಗೆ ಕ್ರಮವಹಿಸುವುದು.

R. Nagesha
**ನಿರ್ದೇಶಕರು**

**ಕಾಲೇಜು ಶಿಕ್ಷಣ ಇಲಾಖೆ**

**ಇವರಿಗೆ:**

**ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ**

**ಪ್ರತಿಗಳು:**

1. ಎಲ್ಲಾ ಖಜಾನೆ/ಉಪಖಜಾನೆ ಅಧಿಕಾರಿಗಳಿಗೆ- ಮಾಹಿತಿಗಾಗಿ
2. ಲೆಕ್ಕಾಧಿಕಾರಿಗಳು ಕಾಶಿಇ ಕೇಂದ್ರ ಕಛೇರಿ ಬೆಂಗಳೂರು -ಮಾಹಿತಿಗಾಗಿ
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು ಕಾಲೇಜು ಶಿಕ್ಷಣ ಇಲಾಖೆ ಕೇಂದ್ರ ಕಚೇರಿ ಬೆಂಗಳೂರು- ಸುತ್ತೋಲೆಯನ್ನು ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
4. ಕಛೇರಿ ಪ್ರತಿ

3820863
15/03/2022 ಅನುಬಂಧ 15/03

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪ್ರಧಾನ ಲೆಕ್ಕ ಶೀರ್ಷಿಕೆ 2202-ಸಾಮಾನ್ಯ ಶಿಕ್ಷಣ ರಡಿ ಒಟ್ಟು ರೂ. 2800.00ಲಕ್ಷಗಳನ್ನು ಪುನರ್ವಿನಿಯೋಗದ ಮೂಲಕ ಅನುದಾನ ಒದಗಿಸುವ ಬಗ್ಗೆ.

ಓದಲಾಗಿದೆ:- 1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಏಕ ಕಡತ ಸಂಖ್ಯೆ: DCE/BUD/RAG/3/2022-BUD
2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 141 ವೆಚ್ಚ-8/ 2022 ದಿನಾಂಕ: 09/03/2022.
3. ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ.594 ಬಿ.ಆರ್.ಎಸ್. 2021 ಬೆಂಗಳೂರು, ದಿನಾಂಕ:08/03/2022.

ಪ್ರಸ್ತಾವನೆ:

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಏಕ ಕಡತದಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು, ಲೆಕ್ಕಶೀರ್ಷಿಕೆ: 2202-03-103-2-01- (014) ಇತರೆ ಭತ್ಯೆಗಳು ಅಡಿಯಲ್ಲಿ ರೂ. 400.00ಲಕ್ಷಗಳು ಮತ್ತು 2202-03-103-2-01- (002) ಅಧಿಕಾರಿಗಳ ವೇತನ ಅಡಿಯಲ್ಲಿ ರೂ. 2400.00 ಲಕ್ಷಗಳು, ಒಟ್ಟು ರೂ. 2800.00ಲಕ್ಷಗಳ ಕೊರತೆಯಾಗಿರುತ್ತದೆ. ಆದ್ದರಿಂದ ಲೆಕ್ಕ ಶೀರ್ಷಿಕೆ: 2202-03-103-2-01-011-ತುಟ್ಟಿಭತ್ಯೆ ಅಡಿಯಲ್ಲಿ ಉಳಿತಾಯವಾಗುವ ಒಟ್ಟು ರೂ.2800.00 ಲಕ್ಷಗಳನ್ನು ಪುನರ್ವಿನಿಯೋಗದ ಮೂಲಕ ಒದಗಿಸಲು ಸರ್ಕಾರವನ್ನು ಕೋರಲಾಗಿದೆ.

ಮೇಲೆ ಕ್ರಮಾಂಕ (3) ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಆದೇಶದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಲೆಕ್ಕ ಶೀರ್ಷಿಕೆ: 2202-03-103-2-01-011-ತುಟ್ಟಿಭತ್ಯೆ ಅಡಿಯಲ್ಲಿ ಉಳಿತಾಯವಾಗುವ ಒಟ್ಟು ರೂ.2800.00 ಲಕ್ಷಗಳನ್ನು ಪುನರ್ವಿನಿಯೋಗದ ಮೂಲಕ ಒದಗಿಸಲು ಮಂಜೂರಾತಿ ನೀಡಿದೆ.

ಪ್ರಸ್ತಾವನೆಯಲ್ಲಿ ಕೋರಿರುವಂತೆ, ಸದರಿ ಅನುದಾನವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಇವರಿಗೆ ಬಿಡುಗಡೆಗೊಳಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 31 ಹೆಚ್ ಪಿ ಸಿ 2022,**
**ಬೆಂಗಳೂರು. ದಿನಾಂಕ: 14/03/2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ.594 ಬಿ.ಆರ್.ಎಸ್. 2022 ಬೆಂಗಳೂರು, ದಿನಾಂಕ:08/03/2022 ರಲ್ಲಿ ಪುನರ್ ವಿನಿಯೋಗದ ಮೂಲಕ ಮಂಜೂರು ಮಾಡಿರುವಂತೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಇವರಿಗೆ 2021-22ನೇ ಸಾಲಿಗೆ ಕೆಳಕಂಡ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

SRC/UG

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಮುಂಗಡ ಪತ್ರದ ಪ್ರಧಾನ, ಉಪ ಮತ್ತು ವಿವರವಾದ ಶೀರ್ಷಿಕೆಗಳು | ಬಿಡುಗಡೆ ಮಾಡಿದ ಅನುದಾನ |
|---|---|---|
| 1 | 2202-03-103-2-01-014 ಇತರೆ ಭತ್ಯೆಗಳು | 400.00 |
| 2 | 2202-03-103-2-01- 002 ವೇತನ ಅಧಿಕಾರಿಗಳು | 2400.00 |
| ಒಟ್ಟು | | 2800.00 |

(ರೂಪಾಯಿ ಎರಡು ಸಾವಿರದ ಎಂಟು ನೂರು ಲಕ್ಷಗಳು ಮಾತ್ರ

ಷರತ್ತುಗಳು:

1. ಬಿಡುಗಡೆ ಮಾಡಿದ ಅನುದಾನವನ್ನು ವ್ಯಪಗತ ಮಾಡದೇ ಪ್ರಸ್ತುತ ಸಾಲಿನಲ್ಲಿಯೇ ಸಂಪೂರ್ಣ ಬಳಸಿಕೊಳ್ಳುವುದು.
2. ಪ್ರತಿಯೊಂದು ವೆಚ್ಚವನ್ನು ಸಕ್ಷಮ ಪ್ರಾಧಿಕಾರದಿಂದ ಸೂಕ್ತ ಅನುಮೋದನೆ ಪಡೆದುಕೊಂಡ ನಂತರವೇ ಭರಿಸತಕ್ಕದ್ದು.
3. ಸರ್ಕಾರವು ವೇತನಕ್ಕಾಗಿ ಬಿಡುಗಡೆ ಮಾಡುತ್ತಿರುವ ಮೊತ್ತವನ್ನು ಕೇವಲ ಸರ್ಕಾರದಿಂದ ಮಂಜೂರಾದ ಹುದ್ದೆಗಳಿಗೆ ಎದುರಾಗಿ ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ನೇಮಕ ಮಾಡಿಕೊಂಡಿರುವವರಿಗೆ ಮಾತ್ರ ವೇತನ ಪಾತಿಸಲು ಬಳಸತಕ್ಕದ್ದು.
4. ಬಳಕೆ ಮಾಡಲಾದ ಮೊತ್ತಕ್ಕೆ ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 141 ವೆಚ್ಚ-8/ 2022, ದಿನಾಂಕ: 09/03/2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

14/03/2022
(ಎಂ.ಜಿ. ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ [ಎ&ಇ], ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.

4. ಲೆಕ್ಕಾಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ, ಬೆಂಗಳೂರು.
6. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
7. ಉಪ-ನಿರ್ದೇಶಕರು, ಖಜಾನೆ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.

ಪ್ರತಿಗಳು ಮಾಹಿತಿಗಾಗಿ:

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌದ, ಬೆಂಗಳೂರು.
4. ಹೆಚ್ಚುವರಿ ಪ್ರತಿ/ರಕ್ಷಾ ಕಡತ/ಕಡತ ಪ್ರತಿ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2021-22 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪ್ರಧಾನ ಲೆಕ್ಕ ಶೀರ್ಷಿಕೆ 2202-ಸಾಮಾನ್ಯ ಶಿಕ್ಷಣ ರಡಿ ಒಟ್ಟು ರೂ. 2800.00 ಲಕ್ಷಗಳನ್ನು ಪುನರ್ವಿನಿಯೋಗದ ಮೂಲಕ ಅನುದಾನ ಒದಗಿಸುವ ಬಗ್ಗೆ.

ಓದಲಾಗಿದೆ: ಕಡತ ಸಂಖ್ಯೆ: ಆಇ 141 ವೆಚ್ಚ-8/ 2022

*****

ಪ್ರಸ್ತಾವನೆ:

ಲೆಕ್ಕ ಶೀರ್ಷಿಕೆ 2202-03-103-2-01-014-ಇತರೆ ಭತ್ಯೆ ಅಡಿಯಲ್ಲಿ ರೂ.400.00 ಲಕ್ಷಗಳು, 002-ವೇತನ -ಅಧಿಕಾರಿಗಳು ಅಡಿಯಲ್ಲಿ ರೂ.2400.00 ಲಕ್ಷಗಳು ಒಟ್ಟು ರೂ. 2800.00 ಲಕ್ಷಗಳ ಕೊರತೆಯಾಗಿರುತ್ತದೆ. ಆದ್ದರಿಂದ ಲೆಕ್ಕ ಶೀರ್ಷಿಕೆ, 2202-03-103-2-01-011-ತುಟ್ಟಿ ಭತ್ಯೆ ಅಡಿಯಲ್ಲಿ ಉಳಿತಾಯವಾಗುವ ಒಟ್ಟು ರೂ. 2800.00 ಲಕ್ಷಗಳನ್ನು ಪುನರ್ವಿನಿಯೋಗದ ಮೂಲಕ ಒದಗಿಸಲು ಮೇಲೆ ಓದಲಾದ ಕಡತದಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: FD 594 BRS 2021, ಬೆಂಗಳೂರು, ದಿನಾಂಕ: 08-MAR-2022**

2021-22 ನೇ ಸಾಲಿಗೆ ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವಂತೆ ಲೆಕ್ಕ ಶೀರ್ಷಿಕೆ: 2202-03-103-2-01-014-ಇತರೆ ಭತ್ಯೆ ಅಡಿಯಲ್ಲಿ ರೂ.400.00 ಲಕ್ಷಗಳು, 002-ವೇತನ-ಅಧಿಕಾರಿಗಳು ಅಡಿಯಲ್ಲಿ ರೂ.2400.00 ಲಕ್ಷಗಳು ಒಟ್ಟು ರೂ. 2800.00 ಲಕ್ಷ ( Rupees two thousand eight hundred lakh only) ಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ರೀತ್ಯ ಪುನರ್ವಿನಿಯೋಗದ ಮೂಲಕ ಒದಗಿಸಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

8/3/2022

(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ (ಎಫ್‌ಆರ್ ಮತ್ತು ಬಿಸಿಸಿ)
ಆರ್ಥಿಕ ಇಲಾಖೆ.

08/03/2022

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ.
3. ವಿಶೇಷಾಧಿಕಾರಿ (ಎಫ್.ಆರ್.&ಸಿ.ಸಿ.),ಗಣಕ ಕೋಶ,ಆರ್ಥಿಕ ಇಲಾಖೆ.
4. ಸಂಬಂಧಪಟ್ಟ ವೆಚ್ಚ-8 ಶಾಖೆ

K.F.C. FORM 22-A (ART.108)

ಆಯವ್ಯಯ ಪತ್ರದಲ್ಲಿ ಅಥವಾ ಹೆಚ್ಚಿನ ಹಣ ಹಂಚಿಕೆ (ಅಲಾಟ್‌ಮೆಂಟ್)ಗಳಲ್ಲಿ ಉಪಬಂಧ ಕಲ್ಪಿಸಿಲ್ಲದ ಎಲ್ಲಾ ವಿನಿಯೋಗಗಳಿಗೆ ಅಥವಾ ಮಂಜೂರಾತಿಗೆ ಲಗತ್ತಿಸಬೇಕಾದ ಪುನರ್ ವಿನಿಯೋಗದ ವಿವರಣೆ

17–ಶಿಕ್ಷಣ

(ರೂ. ಲಕ್ಷಗಳಲ್ಲಿ)

**BRS 2021**

| ...ಗದ ಪತ್ರದ ಪ್ರಧಾನ, ಉಪ ಮತ್ತು ವಿವರವಾದ ಶೀರ್ಷಿಕೆಗಳು | ಹೆಚ್ಚಿಸಲು ಪ್ರಸ್ತಾವಿಸಲಾದ ಅಂದಾಜಿನ ಶೀರ್ಷಿಕೆ | | | | ಕಡಿಮೆ ಮಾಡಲು ಪ್ರಸ್ತಾವಿಸಲಾದ ಅಂದಾಜಿನ ಶೀರ್ಷಿಕೆ | | | | ಟಿಪ್ಪಣಿಗಳು (ಇಲ್ಲಿ ಹಂಚಿಕೆ ಮೀರಿದ ಮತ್ತು ಉಳಿತಾಯದ ನಿರೀಕ್ಷೆಗಳಿಗೆ ಸಂಪೂರ್ಣ ಕಾರಣಗಳು) |
|---|---|---|---|---|---|---|---|---|---|
| | 2021–22 ನೇ ಸಾಲಿನ ಆಯವ್ಯಯ ಅಂದಾಜು ಪೂ.ಅಂ+ಪು.ವಿ | ಇದುವರೆಗೆ ಆಗಿರುವ ವೆಚ್ಚ | ಸಂಭವನೀಯ ವೆಚ್ಚ | ಅಗತ್ಯವಿರುವ ಹೆಚ್ಚುವರಿ | 2021–22 ನೇ ಸಾಲಿನ ಆಯವ್ಯಯ ಅಂದಾಜು ಪೂ.ಅಂ+ಪು.ವಿ | ಇದುವರೆಗೆ ಆಗಿರುವ ವೆಚ್ಚ | ಸಂಭವನೀಯ ವೆಚ್ಚ | ಪುನರ್ ವಿನಿಯೋಗಕ್ಕೆ ಲಭ್ಯವಿರುವ ಅನುದಾನ | |
| BRS 2021 | | | | | | | | | |
| )3–103–2–01–002–ಪುರಸ್ಕೃತ–...ರ್ಕಾರಿ ಕಾಲೇಜುಗಳು–ವೇತನ – ...ಗಳು | 77355+0+0+0 +0 =77355 | 67668.92 | 12086.08 | 2400.00 | | | | | ಖಾಲಿ ಹುದ್ದೆ ಭರ್ತಿಯಿಂದ ಕೊರತೆ ಉಂಟಾಗಿರುತ್ತದೆ. |
| )3–103–2–01–014–ಪುರಸ್ಕೃತ–...ರ್ಕಾರಿ ಕಾಲೇಜುಗಳು–ಇತರೆ ಭತ್ಯೆ | 9205+0+0+0+ 0 =9205 | 8060.57 | 1544.43 | 400.00 | | | | | ಖಾಲಿ ಹುದ್ದೆ ಭರ್ತಿಯಿಂದ ಕೊರತೆ ಉಂಟಾಗಿರುತ್ತದೆ. |
| )3–103–2–01–011–ಪುರಸ್ಕೃತ–...ರ್ಕಾರಿ ಕಾಲೇಜುಗಳು–ತುಟ್ಟಿ ಭತ್ಯೆ | | | | | 24788+0+0+0 -772 =24016 | 18405.09 | 2810.91 | 2800.00 | ಮುಂಬಡ್ತಿಯಿಂದ ತೆರವಾದ ಹುದ್ದೆಗಳಿಂದ ಉಳಿತಾಯ. |
| | **86560.00** | **75729.49** | **13630.51** | **2800.00** | **24016.00** | **18405.09** | **2810.91** | **2800.00** | |

**...ees Two Thousand Eight Hundred Lakh Only)**

**...lier Re-Appropriation if any,**

| | | |
|---|---|---|
| -FEB-2022 | FD 448 BRS 2021 2202-03-103-2-01-011-V | 772 |

**...tionality Orders.**

8/3/2022

(ಹೆಚ್.ಎ. ಶೋಭ)

ಸರ್ಕಾರದ ಉಪ ಕಾರ್ಯದರ್ಶಿ (ಎಫ್‌ಆರ್ ಮತ್ತು ಬಿಸಿಸಿ)

08/03/2022

3820625
15/03/2022 Banglore 15/3

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 46 ಹೆಚ್‌ಪಿಸಿ 2022.

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 14.03.2022.

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ,

ಆಯುಕ್ತರು,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಶೇಷಾದ್ರಿ ರಸ್ತೆ,
ಬೆಂಗಳೂರು-560 001.

ಮಾನ್ಯರೇ,

ವಿಷಯ:- ಹಿಂದಿನ ಆರ್ಥಿಕ ವರ್ಷದ ಬಾಕಿಯನ್ನು ಸೆಳೆಯಲು ಅನುಮತಿ ನೀಡುವ ಕುರಿತು:

ಉಲ್ಲೇಖ:- ಕಾಲೇಜು ಶಿಕ್ಷಣ ಇಲಾಖೆಯ ಏಕ ಕಡತ ಸಂಖ್ಯೆ: DCE//BUD/GEN/62/2021

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಏಕ ಕಡತದಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ, 2021-22ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2202-03-103-2-01 ಇತರೆ ಸರ್ಕಾರಿ ಕಾಲೇಜುಗಳು ಅಡಿಯಲ್ಲಿ ವೇತನ ಮತ್ತು ಇತರೆ ಭತ್ಯೆಗಳ ಪಾವತಿಗೆ ಮಂಜೂರಾದ ಅನುದಾನದಲ್ಲಿ ಫೆಬ್ರವರಿ 2022ರವರೆಗೆ ವೇತನ ಪಾವತಿಸಿದ ನಂತರ ಉಳಿಕೆಯಾಗಲಿರುವ ಅನುದಾನದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಕೇಂದ್ರ ಕಛೇರಿ/ಪ್ರಾಧೇಶಿಕ ಕಛೇರಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ನಿವೃತ್ತಿ ಹೊಂದಿರುವ ಅಧಿಕಾರಿ/ನೌಕರರುಗಳಿಗೆ ವೇತನ ಬಾಕಿ ಸ್ಥಾನೀಕರಣ ಹಿಂಬಾಕಿ, ಬೋಧಕರುಗಳಿಗೆ ಪಿ.ಹೆಚ್.ಡಿ ಪದವಿ ಪಡೆದ ಪ್ರಯುಕ್ತ ಮುಂಗಡ, ವಾರ್ಷಿಕ ವೇತನ ಬಡ್ತಿ ಹಿಂಬಾಕಿ ಮತ್ತು ಟಿ.ಬಿ.ಎ/ಟಿ.ಬಿ.ಪಿ ವಾರ್ಷಿಕ ವೇತನ, ಬಡ್ತಿ ವೇತನ ಮತ್ತು ಇತರೆ ವಿವಿದ ಭತ್ಯೆಗಳ ಹಿಂಬಾಕಿ ಪಾವತಿಸಲು ಸರ್ಕಾರದಿಂದ ಅನುಮತಿ ನೀಡಲಾಗಿದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ಈ ಪತ್ರವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 149 ವೆಚ್ಚ-8/2022 ದಿನಾಂಕ: 10/03/2022 ರ ಸಹಮತಿಯಂತೆ ಹೊರಡಿಸಲಾಗಿದೆ.

ತಮ್ಮ ನಂಬುಗೆಯ,

14/03/2022

(ಎಂ.ಜಿ. ವೆಂಕಟೇಶಯ್ಯ)

ಸರ್ಕಾರದ ಉಪ ಕಾರ್ಯದರ್ಶಿ,

(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)

ಉನ್ನತ ಶಿಕ್ಷಣ ಇಲಾಖೆ.